# ಕರ್ನಾಟಕ ಪರೀಕ್ಷಾ ಪ್ರಾಧಿಕಾರ
# Karnataka Examinations Authority

ಸಂಖ್ಯೆ: ಇಡಿ/ಕೆಇಎ/ವಿಶೇಷ-SVR/2023 ದಿನಾಂಕ: 03-11-2023

2023ನೇ ಸಾಲಿನ ವೈದ್ಯಕೀಯ / ದಂತ ವೈದ್ಯಕೀಯ ಸೀಟುಗಳ ಪ್ರವೇಶಾತಿಗೆ ಆನ್‌ಲೈನ್ ವಿಶೇಷ Stray Vacancy Round

ಎಮ್‌ಸಿಸಿ ರವರ ಸೂಚನೆ U-11011/01/2023-MEC, ದಿನಾಂಕ 31-10-2023 ಅನ್ವಯ ವೈದ್ಯಕೀಯ / ದಂತ ವೈದ್ಯಕೀಯ ಸೀಟುಗಳ ಪ್ರವೇಶಾತಿಗೆ ವಿಶೇಷ Stray Vacancy Round ಅನ್ನು ಆನ್‌ಲೈನ್ ಮೂಲಕ ನಡೆಸಲಾಗುವುದು. ಆಯಾ ಕೋರ್ಸುಗಳ ಅಂತಿಮ ಸುತ್ತಿನ ಸೀಟು ಹಂಚಿಕೆಯ ನಂತರ ಖಾಲಿ ಉಳಿದಿರುವ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಸೀಟುಗಳನ್ನು ಹಂಚಿಕೆಗೆ ಪರಿಗಣಿಸಲಾಗುವುದು.

- ✓ ಹಿಂದಿನ ಯಾವುದೇ ಸುತ್ತುಗಳಲ್ಲಿ ಯಾವುದೇ ವೈದ್ಯಕೀಯ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳು ಮಾತ್ರ ವೈದ್ಯಕೀಯ ಸೀಟು ಹಂಚಿಕೆಗೆ ಭಾಗವಹಿಸಲು ಅರ್ಹರಾಗಿರುತ್ತಾರೆ.
- ✓ ದಂತ ವೈದ್ಯಕೀಯ / ಆಯುಷ್ / ಇಂಜಿನಿಯರಿಂಗ್ ಸೀಟು ಹಂಚಿಕೆಯಾದವರು ಸಹ ವೈದ್ಯಕೀಯ ಸೀಟು ಹಂಚಿಕೆಗೆ ಭಾಗವಹಿಸಬಹುದು. ಆದರೆ ಒಂದು ವೇಳೆ ವೈದ್ಯಕೀಯ ಸೀಟು ಹಂಚಿಕೆಯಾದಲ್ಲಿ ಈಗಾಗಲೇ ದಂತ ವೈದ್ಯಕೀಯ / ಆಯುಷ್ / ಇಂಜಿನಿಯರಿಂಗ್ ಸೀಟುಗಳಿಗೆ ಪಾವತಿಸಿದ ಮೊತ್ತವನ್ನು ಹಿಂದಿರುಗಿ ಪಡೆಯಲು ಅರ್ಹತೆ ಇರುವುದಿಲ್ಲ. ಹಂಚಿಕೆಯಾದ ವೈದ್ಯಕೀಯ ಸೀಟು ಅಂತಿಮವಾಗಿದ್ದು, ಅಭ್ಯರ್ಥಿಗಳು ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು. ಮತ್ತು ದಂತ ವೈದ್ಯಕೀಯ / ಆಯುಷ್ / ಇಂಜಿನಿಯರಿಂಗ್ ಸೀಟು ರದ್ದುಗೊಳ್ಳುತ್ತದೆ.
- × ಅಖಿಲ ಭಾರತ ವಿಶೇಷ Stray Vacancy Round ನಲ್ಲಿ ಸೀಟು ಹಂಚಿಕೆ ಮಾಡಿಕೊಳ್ಳುವ ಅಭ್ಯರ್ಥಿಗಳು ಅರ್ಹತೆ ಪಡೆಯುವುದಿಲ್ಲ.

SUBMISSION OF DEMAND DRAFTS TO ENTER OPTIONs

Candidates are advised to go through the seat matrix and fees structure published in the KEA Website. Interested candidates can participate in this round with requisite fee obtained in the form of Demand Draft drawn in favour of "The Executive Director, KEA" payable at Bangalore.

If a candidate wishes to opt for MBBS Government seat, then he should submit DD for Rs. 60,100/- or Rs.1,41,446/- to be eligible for option entry for Government seats only.

Similarly, a candidate submitting DD of Rs. 10,92,852/- shall be eligible for option entry for Government and Private (P) seats, a candidate submitting DD of Rs. 22,15,750/- shall be eligible for option entry for Government and Private (P) seats of Private Universities, a candidate submitting DD of Rs. 40,12,700/- shall be eligible for option entry for Government, Private (P) seats, Private Universities and OTHERs (Q) seats.

***Hence, the candidates should have obtained the demand draft well in advance by keeping in mind the bank holidays. Candidates can bring multiple demand drafts equal to the highest fees which they are interested to join.***

ಅಭ್ಯರ್ಥಿಗಳು ವೆರಿಫಿಕೇಶನ್ ಸ್ಲಿಪ್, ಎಲ್ಲಾ ಮೂಲ ದಾಖಲೆಗಳು ಹಾಗು ಅಗತ್ಯವಿರುವ ಮತ್ತಿತರ ದಾಖಲೆಗಳು, ಡಿಡಿಯೊಂದಿಗೆ ಹಾಜರಾಗಬೇಕು.

**ವೈದ್ಯಕೀಯ** ಸೀಟುಗಳ ಪ್ರವೇಶಕ್ಕಾಗಿ ಅಭ್ಯರ್ಥಿಗಳು ಕೆಇಎ, ಬೆಂಗಳೂರು ಕಚೇರಿಯಲ್ಲಿ ದಿನಾಂಕ **07-11-2023** (ಬೆ. 10.00 ರಿಂದ ಸಂ.5.00) ಅಥವಾ **08-11-2023** ರ ಮಧ್ಯಾಹ್ನ 2.00 ರೊಳಗೆ ಡಿಮ್ಯಾಂಡ್ ಡ್ರಾಫ್ಟ್ ಅನ್ನು ಸಲ್ಲಿಸಬೇಕು. ಡಿಡಿ ಸಲ್ಲಿಸುವ ಅಭ್ಯರ್ಥಿಗಳಿಗೆ ಮಾತ್ರ ಇಚ್ಛೆಗಳನ್ನು ದಾಖಲಿಸಲು ಪೋರ್ಟಲ್ ಅನ್ನು ತೆರೆಯಲಾಗುತ್ತದೆ. ದಿನಾಂಕ **09-11-2023** ರ ಬೆಳಿಗ್ಗೆ 9.00 ಗಂಟೆಗೆ ಇಚ್ಛೆಗಳನ್ನು ದಾಖಲಿಸುವುದು ಮುಕ್ತಾಯವಾಗುತ್ತದೆ. ಸೀಟು ಹಂಚಿಕೆಯ ಫಲಿತಾಂಶವನ್ನು **09-11-2023ರ** ಸಂಜೆ 4.00 ಗಂಟೆಯ ನಂತರ ಪ್ರಕಟಿಸಲಾಗುವುದು. ಸೀಟು ಹಂಚಿಕೆಯಾಗದ ಅಭ್ಯರ್ಥಿಗಳಿಗೆ ಅದೇ ದಿನ ಡಿಡಿಗಳನ್ನು ಹಿಂದಿರುಗಿಸಲಾಗುವುದು. ಸೀಟು ಹಂಚಿಕೆಯಾಗುವ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಪಡೆದುಕೊಂಡು ಕಾಲೇಜಿನಲ್ಲಿ ದಿನಾಂಕ **10-11-2023ರ** ಸಂಜೆ. 5.00 ರೊಳಗೆ ಪ್ರವೇಶ ಪಡೆಯಬೇಕು.

**ದಂತವೈದ್ಯಕೀಯ** ಕೋರ್ಸುಗಳಿಗೆ ವಿಶೇಷ ಸುತ್ತನ್ನು ದಿನಾಂಕ **10-11-2023** ರಂದು ನಡೆಸಲಾಗುವುದು. (ಯಾವುದೇ ವೈದ್ಯಕೀಯ ಅಥವಾ ದಂತ ವೈದ್ಯಕೀಯ ಸೀಟುಗಳನ್ನು ಹಂಚಿಕೆ ಮಾಡಿಕೊಳ್ಳದೆ ಇರುವ ಅಭ್ಯರ್ಥಿಗಳು ಮಾತ್ರ) ದಂತವೈದ್ಯಕೀಯ ಸೀಟನ್ನು ಆಯ್ಕೆ ಮಾಡಿಕೊಳ್ಳಲು ಇಚ್ಛಿಸುವ ಅರ್ಹ ಅಭ್ಯರ್ಥಿಗಳು ದಂತ ವೈದ್ಯಕೀಯ ಸೀಟಿನ ಶುಲ್ಕಕ್ಕೆ ಅನುಗುಣವಾಗಿ "The Executive Director, KEA" ಇವರ ಹೆಸರಿನಲ್ಲಿ ಪಡೆದ ಡಿಡಿಯನ್ನು ಕೆಇಎ, **ಬೆಂಗಳೂರು** ಇಲ್ಲಿ **10-11-2023 ಬೆ.10.00** ಗಂಟೆಗೆ ಸಲ್ಲಿಸಬೇಕು. ಡಿಡಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ ಇಚ್ಛೆಗಳನ್ನು ದಾಖಲಿಸಲು ಪೋರ್ಟಲ್ ಅನ್ನು ಬೆ. 11.30 ರಿಂದ ಮ. 1.30 ರ ವರೆಗೆ ತೆರೆಯಾಗುವುದು. ಅದೇ ದಿನ ಮಧ್ಯಾಹ್ನ 3.30 ರ ನಂತರ ಸೀಟು ಹಂಚಿಕೆಯ ಫಲಿತಾಂಶವನ್ನು ಪ್ರಕಟಿಸಲಾಗುವುದು. ಸೀಟು ಹಂಚಿಕೆಯಾಗದ ಅಭ್ಯರ್ಥಿಗಳಿಗೆ ಅದೇ ದಿನ ಡಿಡಿಗಳನ್ನು ಹಿಂದಿರುಗಿಸಲಾಗುವುದು. ಸೀಟು ಹಂಚಿಕೆಯಾಗುವ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಪಡೆದುಕೊಂಡು ಕಾಲೇಜಿನಲ್ಲಿ **11-11-2023ರ** ಸಂಜೆ. 5.00 ರೊಳಗೆ ಪ್ರವೇಶ ಪಡೆಯಬೇಕು.

ಸಹಿ/-ಕಾರ್ಯನಿರ್ವಾಹಕ ನಿರ್ದೇಶಕರು.

For availability of seats during counseling:

All candidates are directed to visit the website of KEA http://kea.kar.nic.in at least twice every day for updates. KEA shall not be responsible for any action / consequence/s resulting due to non-diligent follow up of notices, notifications and publications appearing on the KEA website about seat allotment.

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**

18th Cross, Sampige Road, Malleshwaram, Bengaluru - 560 012.

Phone: 080 - 23 564 583, 23 460 460, 23 361 786, Fax: 080 - 23 461 576

e-mail : keauthority-ka@nic.in Website : http://kea.kar.nic.in